ಮೂಲಕಾರಣ ಸಂಜೀವಣ್ಣನೇ. ಅವರ ಹರೆಯದ ದಿನಗಳಲ್ಲಿ ಸಂಜೀವಣ್ಣನದು ಸೇಂದಿ ಕಂಟ್ರ್ಯಾಕ್ಟ್ ಬಿಸಿನೆಸ್ ಇದ್ದದ್ದು. ಸರಕಾರಿ ಕೆಲಸ ತೊರೆದು ಹಾಸನದಲ್ಲಿ ಬಂದು ಉಳಿದ ಖಲಂದರ್‌ಗೆ ಯಾವ ದಂಧೆ ಕೈಗೊಳ್ಳಬೇಕು ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಮೂಡಿರಲಿಲ್ಲ. ಆಗ ರಮ್ಜಾನ್ ತಿಂಗಳಾಗಿತ್ತು. ಆ ತಿಂಗಳಿನಲ್ಲಿ ಪ್ರತಿ ಗುರುವಾರ ಮತ್ತು ಶುಕ್ರವಾರ ಸಂಜೀವಣ್ಣ ಒಂದು ಬುಟ್ಟಿ ಹಣ್ಣನ್ನು ಸಂಜೆ ಉಪವಾಸ ಬಿಡುವ ವೇಳೆಗೆ ಮಸೀದಿಯ ಮುಂಭಾಗದಲ್ಲಿ ತಂದಿಡುತ್ತಿದ್ದ. ಉಪವಾಸಿಗರು ಉಪವಾಸವನ್ನು ಬಿಡುವಾಗ ಆ ಹಣ್ಣುಗಳನ್ನು ಸೇವಿಸುತ್ತಿದ್ದರು. ಹಾಗೆ ಬುಟ್ಟಿಗಟ್ಟಲೆ ಹಣ್ಣನ್ನು ಖರೀದಿ ಮಾಡುವಾಗ ಹಣ್ಣಿನ ಮಂಡಿಯವರೊಡನೆ ವ್ಯವಹಾರ ಮಾಡುತ್ತಾ ಕೊನೆಗೆ ಖಲಂದರ್ ಅದನ್ನು ತನ್ನ ಬದುಕಿನ ಮೂಲಾಧಾರವೆಂದು ಭಾವಿಸುತ್ತಿದ್ದಂತೆ, ತಳ್ಳುಗಾಡಿಯ ಹಣ್ಣಿನ ವ್ಯವಹಾರ ಅವನ ಕೈ ಹಿಡಿದು ಬಿಟ್ಟಿತು. ಆದರೆ, ಕ್ರಮೇಣ ಕೆಲವರಿಂದ ಹಬ್ಬಿದ ಒಡಕು ಮಾತುಗಳಿಂದ ಸಂಜೀವಣ್ಣನ ಮನಸ್ಸು ಕದಡಿ ಹೋಯಿತು. ಹಿಂದುಪುರದಿಂದ ಲಾರಿ ಫೈನಾನ್ಸ್ ಮಾಡುತ್ತಾ, ಬಡ್ಡಿ ವ್ಯವಹಾರದಲ್ಲಿ ಮುಳುಗೇಳುತ್ತಿದ್ದ ಅಮಾನುಲ್ಲಾ ಹರಡಿದ ಮಾತೊಂದು ಈ ಸಂಬಂಧವನ್ನು ಕೊನೆಗಾಣಿಸಿತು. 'ಸೇಂದಿಯ ಹಣದ ಸಂಪಾದನೆಯಿಂದ ಸಂಜೀವಣ್ಣ ಉಪವಾಸಿಗರಿಗೆ ಹಣ್ಣು ನೀಡುತ್ತಿದ್ದಾನೆ. ಯಾವ ರೋಝುದಾರ್ (ಉಪವಾಸಿಗ) ಕೂಡಾ ಅದನ್ನು ತಿನ್ನುವುದು ಬೇಡ' ಎಂದು ಫರ್ಮಾನು ಹೊರಡಿಸಿದ. ಅಮಾನುಲ್ಲಾನ ದೆಸೆಯಿಂದ, ಯಾರೊಬ್ಬರೂ ಸಂಜೀವಣ್ಣನ ಹಣ್ಣಿನ ಬುಟ್ಟಿಯಿಂದ ಹಣ್ಣನ್ನು ಸ್ವೀಕರಿಸಲಿಲ್ಲ. ಅನೂಚಾನವಾಗಿ ನಡೆದುಕೊಂಡು ಬಂದಿದ್ದ ಪದ್ಧತಿಯೊಂದು ಕೊನೆಗೊಂಡಿತ್ತು. ಬೇಜಾರಿನಿಂದ ಕೂಡಿದ ಸಂಜೀವಣ್ಣ ಮಾತ್ರ ಖಲಂದರ್ ಹತ್ತಿರ ತನ್ನ ದುಃಖ ತೋಡಿಕೊಂಡಿದ್ದ, "ಅಲ್ಲ ಕಣೋ, ನಂಗೆ ಹೊಲ ಗದ್ದೆ ಇದೆ. ಸೌದೆ ವ್ಯಾಪಾರ ನಡೆಯುತ್ತಿದೆ. ಈ ಅಮಾನುಲ್ಲಾ ನನ್ ಮಗ ಅದನ್ನ ಸೇಂದಿ ದುಡ್ಡು ಅಂತ ಹೇಳಿದನಲ್ಲಾ" ಎಂದು ಅಪಾರವಾಗಿ ನೊಂದುಕೊಂಡ.

ಹೀಗೆ ಆ ದಿನ ಅವನ ವರ್ತಮಾನಕ್ಕೂ ಭೂತಕಾಲಕ್ಕೂ ಸಂಪರ್ಕವನ್ನು ಕಲ್ಪಿಸುತ್ತಾ, ಅವನ ಮನೋವ್ಯಾಪಾರವನ್ನು ವಿಚಿತ್ರವಾಗಿ ಸರಿದೂಗಿಸುತ್ತಾ ಸಮ್ಮಿಶ್ರ ಭಾವನೆಯಲ್ಲಿ ತೊಡಗಿದ್ದಾಗಲೇ ಮತ್ತೊಂದು ಆಲೋಚನೆ ಬುಳಕ್ಕೆಂದು ತಲೆ ಎತ್ತಿತು. ಯಾವಾಗಲಾದರೊಮ್ಮೆ ಮೈಸೂರಿಗೆ ಹೋಗಿ ತನ್ನ ಮಗಳಾದ ದಿಲ್‌ಶಾದ್‌ಳನ್ನು ನೋಡಿ ಬರಬೇಕೆಂದು ಅಂದುಕೊಂಡ. ಸುಮಾರು ಒಂದು ತಿಂಗಳಿನಿಂದಲೂ ಅವನ ಈ ಆಲೋಚನೆ ಕಾರ್ಯಗತವಾಗಿರಲಿಲ್ಲ. ದಿಲ್‌ಶಾದ್‌ನ ಮಗನಿಗೆ ಮುಂಜಿ ಮಾಡಿಸಿದ್ದಾರೆ ಎಂದು ಫೋನ್ ಬಂದ ಕೂಡಲೇ ಅವನ ಹೆಂಡತಿ ಅಮ್ಜದ್‌ನೊಡನೆ ಕೂಡಿ ರೆಕ್ಕೆ ಕಟ್ಟಿಕೊಂಡು ಹಾರಿ ಹೋಗಿದ್ದಳು. ಹದಿನೈದು ದಿನಗಳ ಕಾಲ ಮೈಸೂರಿನಲ್ಲಿಯೇ ಉಳಿದು ಆ ಮಗುವಿನ ಆರೈಕೆ ಮಾಡಿ ಅದಕ್ಕೆ ಉಡುಗೊರೆಯನ್ನು ನೀಡಿ ಸಂಪ್ರದಾಯಬದ್ಧವಾಗಿ ಏನೇನು ಮಾಡಬೇಕೋ ಎಲ್ಲಾ ಕರ್ತವ್ಯಗಳನ್ನು ಮಾಡಿ ಮುಗಿಸಿದ್ದಳು. ಆದರೆ, ಖಲಂದರ್ ಒಂದು ಸಾರಿಯೂ ಮಗಳನ್ನು ಮತ್ತು ಮೊಮ್ಮಗುವನ್ನು ಕಾಣಲು ಹೋಗಿರಲಿಲ್ಲ. ಅಸಲಿಗೆ ದಿಲ್‌ಶಾದ್‌ನ ಮಗನ ಮುಂಜಿಯು ಅವನ ಮನೆಯಲ್ಲಿಯೇ ಹಾಸನದಲ್ಲಿ ನಡೆಯಬೇಕಿತ್ತು. ಅದು ಸರಿಯಾದ ಕ್ರಮ. ಆದರೆ, ಅವನ ಅಳಿಯ ಹಟಹಿಡಿದಿದ್ದೇನೆಂದರೆ ಮೈಸೂರಿನಲ್ಲಿ ಡಾಕ್ಟರು ಹೊಸ ಪದ್ಧತಿಯಲ್ಲಿ ಆಪರೇಷನ್ ಮಾಡಿ ಮಗುವಿನ ಶಿಶ್ನಕ್ಕೆ ಪುಟ್ಟ ಬಿರಡೆ ಆಕಾರದ ಬ್ಯಾಂಡೇಜನ್ನು ಕಟ್ಟುತ್ತಾರೆ. ಮೂರನೆಯ ದಿನ ಬ್ಯಾಂಡೇಜ್ ತಂತಾನೇ ಬಿದ್ದುಹೋಗುತ್ತದೆ ಮತ್ತು ಮಗುವಿನ ಗಾಯ ಆ ಹೊತ್ತಿಗೆ ಮಾಯ್ದಿರುತ್ತದೆ. ಹೀಗಾಗಿ, ತನ್ನ ಮಗನಿಗೆ ಮೈಸೂರಿನಲ್ಲಿಯೇ ಮುಂಜಿ ನಡೆಯಬೇಕೆಂದು ಅವನು ಫರ್ಮಾನ್ ಹೊರಡಿಸಿದ್ದ. ಅದಕ್ಕೆ ತಕ್ಕಂತೆ ಅಮ್ಜದ್ ಕೂಡ ತಾಳ ಹಾಕಿದ್ದರಿಂದ ಮುಂಜಿ ಕಾರ್ಯಕ್ರಮ ಮೈಸೂರಿಗೆ ಶಿಫ್ಟ್ ಆಗಿತ್ತು. ಆ ಕಾರ್ಯಕ್ರಮದ ಸಕಲ ಖರ್ಚನ್ನು ಖಲಂದರ್ ಭರಿಸಿದ್ದ. ಆದರೆ, ಅವನಾಗಲೀ ಅವನ